CHETHANA DEGREE COLLEGE

**SE – 007**

**ಮೊದಲನೇ ಸೆಮಿಸ್ಟರ್ ಬಿ.ಬಿ.ಎ. ಪರೀಕ್ಷೆ, ಜನವರಿ/ಫೆಬ್ರವರಿ 2026**
**(SEP 2025) (Freshers)**
**ಕನ್ನಡ ಭಾಷಾ ಪತ್ಯ – 1**
**ವ್ಯವಹಾರ ಆಡಳಿತ ಕನ್ನಡ – 1**

Time : 3 Hours Max. Marks : 80

I. **ಆರು** ಪ್ರಶ್ನೆಗಳಿಗೆ ಉತ್ತರಿಸಿ. (**40** ಪದಗಳಿಗೆ ಮೀರದಂತೆ) **(6×2=12)**

1) ದಿಟ್ಟ ಹುಡುಗ ಪ್ರಾಣಬಿಟ್ಟಿದ್ದು ಹೇಗೆ ?
2) ಬಾಲ್ಯದ ಆಟಗಳು ಯಾವುವು ?
3) ವಿದ್ಯಾರ್ಥಿಗಳಲ್ಲಿ ಎಷ್ಟು ವಿಧಗಳಿವೆ ?
4) ಮನುಷ್ಯ ನೆಲೆ ಕಂಡುಕೊಳ್ಳುವುದು ಹೇಗೆ ?
5) ಪಾಳೆಗಾರನ ವಿರುದ್ಧ ದೊಂಬನ ಪತ್ನಿ ಪ್ರತಿಭಟಿಸಿದ್ದು ಹೇಗೆ ?
6) ಹುಡುಗರು ಕೈ ತಪ್ಪಿದಾಗ ಹುಡುಗಿಯರು ಏನು ಮಾಡುತ್ತಾರೆ ?
7) ಚಳ್ಳಸಾಬಿ ಏನನ್ನು ಮಾರಲು ಬರುತ್ತಿದ್ದನು ?
8) ಮಾದೇಗೌಡರು ಹೆಂಡತಿಗೆ ಎಂಥ ಕತೆಗಳನ್ನು ಹೇಳುತ್ತಿದ್ದರು ?

II. **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. (**80** ಪದಗಳಿಗೆ ಮೀರದಂತೆ) **(4×5=20)**

1) ಶಿಕ್ಷಣವೆಂದರೇನು ? ಚರ್ಚಿಸಿ.
2) ಹತ್ತಿರದ ಜೀವ ಸಂಪರ್ಕ ಸೃಷ್ಟಿಯಾದದ್ದು ಹೇಗೆ ? ವಿವರಿಸಿ.
3) ಪಾಳೆಗಾರನ ಸವಾಲಿನಂತೆ ದೊಂಬನು ಹಾರಿದ ಬಗೆ ಹೇಗೆ ?
4) ಲೇಖಕರು ಮತ್ತು ಅವರ ಮಗಳ ಸಂಬಂಧ ಬಿಗುವಾಗಲು ಕಾರಣವೇನು ?
5) ಪಾದ್ರಿಯ ಪ್ರಭಾವದಿಂದ ಸಣ್ಣಗೌಡರ ವರ್ತನೆ ಹೇಗಿತ್ತು ?
6) ಅಕ್ಕ-ತಮ್ಮರ ಬಾಂಧವ್ಯವನ್ನು ಚಿತ್ರಿಸಿ.

III. **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. (**160** ಪದಗಳಿಗೆ ಮೀರದಂತೆ) **(3×10=30)**

1) ಹುಡುಗನಿಗೆ ಬಿದ್ದ ಕನಸನ್ನು ವಿವರಿಸಿ.
2) ಕಾಡಿನಲ್ಲಿ ಕಂಡ ಕ್ರಿಮಿಕೀಟಗಳ ಜಾತ್ರೆಯ ಮಹೋತ್ಸವವನ್ನು ವಿವರಿಸಿ.

P.T.O.

3) ' ಖುಷಿಯ ಮಾರುತ್ತಿದ್ದ ಮಾಯಗಾರ ' ಪ್ರಬಂಧದ ಆಶಯವನ್ನು ಚರ್ಚಿಸಿ.

4) ಜನರಲ್ಲಿ ಬೈಸಿಕಲ್ ಸೃಷ್ಟಿಸಿದ ಹೊಸತನವನ್ನು ವಿಶ್ಲೇಷಿಸಿ.

5) ದೊಂಬನು ಬೇರಾಗಿ ಕವಲೊಡೆದ ಬಗೆ 'ಭೂಮಿ' ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

IV. ಕಾಲೇಜಿನಲ್ಲಿ ಉದ್ಯೋಗ ಮೇಳವನ್ನು ಏರ್ಪಡಿಸುವಂತೆ ಕೋರಿ ಪ್ರಾಂಶುಪಾಲರಿಗೊಂದು ಅರ್ಜಿ ಬರೆಯಿರಿ. **(1×5=5)**

V. ನಿಮ್ಮ ಕಾಲೇಜಿನಲ್ಲಿ ಆಚರಿಸಲಾದ ಕ್ರೀಡಾಕೂಟ ಸಮಾರಂಭದ ವರದಿಯೊಂದನ್ನು ರಚಿಸಿ. **(1×5=5)**

VI. ಕೆಳಗೆ ಕೊಟ್ಟಿರುವ ಪಠ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ನೀಡಿ. **(1×4=4)**

ಕಾರು ಮನೆ ಮುಂದೆ ಬಂದು ನಿಂತೊಡನೇ ನಾವು ನಮ್ಮ ಲಗೇಜನ್ನೆಲ್ಲ ಒಳ ತರುವ ಮೊದಲೇ ಮಾಡುತ್ತಿದ್ದ ಮೊದಲ ಕೆಲಸವೆಂದರೆ ಮನೆಯ ಬೀಗ ತೆಗೆದು ಮನೆಯನ್ನು ಸ್ವಚ್ಛಗೊಳಿಸುವುದು. ಹತ್ತಿಪ್ಪತ್ತು ದಿನಗಳ ಧೂಳು, ಅಲ್ಲಿಂದಿಲ್ಲಿಗೆ ಕಟ್ಟಿದ್ದ ಜೇಡರ ಬಲೆ, ಚಾವಡಿಯ ಇಳಿಸಿದ ಮಾಡಿಗೆ ಬಿಟ್ಟ ತೋರಣ, ಬಳ್ಳಿಯ ಎಲೆಗಳು ಬಿದ್ದು ರಾಶಿ ಕಸ ತುಂಬಿರುತ್ತಿತ್ತು . ಅದನ್ನು ಸ್ವಚ್ಛಗೊಳಿಸಿದ ನಂತರವೇ ನಮ್ಮ ಲಗೇಜನ್ನು ಒಳ ತರುತ್ತಿದ್ದ ನನಗೆ ಈ ಸಾರಿ ಒಳ ಕಾಲಿಡುತ್ತಿದ್ದಂತೇ ಬಾಗಿಲಿನ ದಾರಂದದ ಎರಡೂ ಬದಿಯಲ್ಲಿ ಅಲ್ಲದೇ ಚಾವಡಿಯ ಗೋಡೆಯ ತುಂಬ ಕಪ್ಪು ಉಲ್ಲನ್ನಿನ ಪುಟ್ಟ ಪುಟ್ಟ ನೂರಾರು ತುಂಡುಗಳು ಅಂಟಿಕೊಂಡಂತೆ ಕಂಡಿತು. ಅರೇ ! ಇದೆಲ್ಲಿಂದ ಬಂತಪ್ಪಾ , ಗಾಳಿಯಲ್ಲಿ ಏನಾದ್ರೂ ಹಾರಿಕೊಂಡು ಬಂತೇ ಎಂದುಕೊಳ್ಳುತ್ತಾ ಸುತ್ತ ನೋಡಿದರೆ ಕೆಲವೆಡೆಗಳಲ್ಲಿ ಮುದ್ದೆ ಮುದ್ದೆ ಕಪ್ಪು ಉಲ್ಲನ್ನಿನ ತುಂಡುಗಳು, ಹತ್ತಿರ ಹೋಗಿ ನೋಡಿದರೆ; ಓಹ್ ಕಂಬಳಿ ಹುಳಗಳು! ಒಂದೆರಡಲ್ಲ ನೂರಾರು ಕಂಬಳಿ ಹುಳಗಳು. ಸುತ್ತಲೂ ನೋಡುತ್ತಾ ಕಣ್ಣು ಮುಂದಿನ ಚಾವಡಿಯ ಇಳಿಸಿದ ಸೂರಿನೆಡೆಗೆ ಹೋದರೆ ಅಲ್ಲೂ ಉಲ್ಲನ್ನಿನ ತುಂಡುಗಳು ಅಂಟಿಕೊಂಡಿವೆ. ಓಹ್ ಇವೇನಾದರೂ ಮೈಮೇಲೆ ಅಥವಾ ತಲೆ ಮೇಲೆ ಬಿದ್ದರೆ; ಮಗಳು, ಇಲ್ಲಿ ಬಂದಾಗೆಲ್ಲ ಹೇಳುವ ಇದು 'ಜಂಗಲ್ ಲೈಫ್ 'ಎನ್ನುವ ಮಾತು ನೆನಪಾಗಿ ಮೈಯೆಲ್ಲ ಮುಳ್ಳೆದ್ದಿತು. ತಮ್ಮ ಉಲ್ಲನ್ನಿನ ದೇಹಕ್ಕೆ ರಕ್ಷಣೆಯಾಗಿ ಅತ್ಯಂತ ತೆಳು ಬಲೆಯಂಥದ್ದನ್ನು ಸೃಷ್ಟಿಸಿಕೊಂಡು ದೊಡ್ಡ ಬಯಲಿನಲ್ಲಿ ಪಿಕ್‌ನಿಕ್ಕಿಗೆ ಬಂದವರು ಟೆಂಟ್ ಹಾಕಿಕೊಂಡು ಬಿದ್ದುಕೊಂಡಂತೆ ನೂರಾರು ಕಂಬಳಿ ಹುಳಗಳು ತಣ್ಣಗೆ ಬಿದ್ದಿದ್ದವು. ಸರ್ರನೇ ಬಿಪಿ ಏರಿತು. ಉದ್ರಿಕ್ತಳಾದವಳು ಒಳಹೋಗಿ ಪೊರಕೆ ತಂದು ಸರಸರ ಝಾಡಿಸಿ ಗುಡಿಸತೊಡಗಿದೆನಷ್ಟೇ . ಅಷ್ಟರಲ್ಲಿ ಒಳ ಬಂದ ಪತಿ, ಆ ಕಂಬಳಿ ಹುಳಗಳನ್ನು ಬಿಡು ಮಾರಾಯ್ತಿ . ಅವುಗಳು ಸ್ವಲ್ಪ ದಿನಗಳಲ್ಲಿ ಚಿಟ್ಟೆಯಾಗಿ ಹಾರಿ ಹೋಗ್ತವೆ.

VII. ನಿಮಗೆ ಗೊತ್ತಿರುವ **ನಾಲ್ಕು** ಗಾದೆಗಳನ್ನು ಬರೆಯಿರಿ. **(1×4=4)**